ಕನ್ನಡಪ್ರಭ ಭಾನುವಾರ 3.2.2019 ಬೆಂಗಳೂರು



# FORM NO. CAA. 2

{ಕಂಪನಿಗಳ ಅಧಿನಿಯಮ 2013 ರ ಪ್ರಕರಣ 230(3)ರ ವಿಚಾರದಲ್ಲಿ ನಮೂದಿಸಿದಂತೆ ಹಾಗು ಕಂಪನಿಗಳ ನಿಯಮ 6 ಮತ್ತು 7 (ಒಪ್ಪಂದಗಳು ವ್ಯವಸ್ಥೆಗಳು ಮತ್ತು ಸಂಯೋಜನೆ) 2016 ರ ನಿಬಂಧನೆಗಳ ಅನುಸಾರ}

ನ್ಯಾಷನಲ್ ಕಂಪನಿ ಲಾ ಟ್ರಿಬ್ಯೂನಲ್ ಎದುರಿಗೆ ಬೆಂಗಳೂರು ಪೀಠ

**CA (CAA) No. 63/BB / 2018**

ಬಾಲಾಜಿ ಮಾಲ್ಟ್ಸ್ ಪ್ರೈವೇಟ್ ಲಿಮಿಟೆಡ್ (ಅರ್ಜಿದಾರ ಕಂಪನಿ / ವರ್ಗಾವಣೆಗೊಳ್ಳುವ ಕಂಪನಿ)

ಮತ್ತು

ಸುಮಂಗಲ್ ಡೀಲರ್ಸ್ ಪ್ರೈವೇಟ್ ಲಿಮಿಟೆಡ್ (ವರ್ಗಾವಣೆ ಕಂಪನಿ)

ಇದರ ಮಧ್ಯೆ ಸಂಯೋಜನಾ ವ್ಯವಸ್ಥೆ ವಿಚಾರವಾಗಿ

ಸದಸ್ಯರು ಮತ್ತು ಸುರಕ್ಷಿತ ಹಾಗೂ ಅಸುರಕ್ಷಿತ ಸಾಲಗಾರರ ಸಭೆಯ ಸೂಚನೆ ಮತ್ತು ಜಾಹೀರಾತು

ಮೇಲ್ಕಂಡ ಕಂಪನಿ ಅರ್ಜಿಯಲ್ಲಿ ವಿಶದೀಕರಿಸಿದಂತೆ ಆದೇಶ ದಿನಾಂಕ 05.11.2018ನ್ನು ಓದಿಕೊಂಡಂತೆ ಗೌರವಾನ್ವಿತ ನ್ಯಾಷನಲ್ ಕಂಪನಿ ಲಾ ಟ್ರಿಬ್ಯೂನಲ್ ಬೆಂಗಳೂರು ಪೀಠ (ಎನ್‌ಸಿಎಲ್‌ಟಿ) 30.01.2019 ರಂದು ನೀಡಿದ ಆದೇಶವನ್ನು ಓದಿಕೊಂಡಂತೆ ಅರ್ಜಿದಾರ ಕಂಪನಿಯ "ಈಕ್ವಿಟಿ ಪಾಲುದಾರರು", "ಸುರಕ್ಷಿತ ಸಾಲಗಾರರು" ಮತ್ತು "ಅಸುರಕ್ಷಿತ ಸಾಲಗಾರರು" ಗಳ ಪರಿಗಣನೆ ತೆಗೆದುಕೊಳ್ಳುವ ಸಲುವಾಗಿ ಪ್ರತ್ಯೇಕ ಸಭೆಗಳನ್ನು ನಡೆಸಲು ನಿರ್ದೇಶಿಸಿತ್ತು. ಇದರಂತೆ ಒಪ್ಪಿಗೆಯಾದಲ್ಲಿ ಬದಲಾವಣೆಯಿಲ್ಲದೆ ಅಥವಾ ಬದಲಾವಣೆಯೊಂದಿಗೆ ಸುಮಂಗಲ್ ಡೀಲರ್ಸ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ ಬಾಲಾಜಿ ಮಾಲ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ಜೊತೆ (ಈ ಯೋಜನೆಯು ಅಮಲ್ಗಮೇಶನ್ ಯೋಜನೆ ಎಂದು ಉಲ್ಲೇಖಿಸಲ್ಪಡುತ್ತದೆ). ಆ ಮೂಲಕ ಸಂಬಂಧಪಟ್ಟ ವರ್ಗಾವಣೆ ಕಂಪನಿಯ ಎಲ್ಲಾ ಹಕ್ಕುಗಳು, ಆಸಕ್ತಿಗಳು, ಕರ್ತವ್ಯಗಳು, ಬಾಧ್ಯತೆಗಳು ಇತರೆ ಎಲ್ಲವನ್ನು ಅರ್ಜಿದಾರ ಕಂಪನಿಗೆ ಮೇಲೆ ಹೇಳಲಾದ ಯೋಜನೆ ಹಾಗೂ ಷರತ್ತುಗಳ ಪ್ರಕಾರ ವರ್ಗಾಯಿಸಲು ಪ್ರಸ್ತಾಪಿಸಲಾಗಿದೆ.

ಸದರಿ ಆದೇಶ ಮತ್ತು ನಿರ್ದೇಶನದ ಮುಂದುವರಿದ ಭಾಗವಾಗಿ ಈ ಸೂಚನೆಯನ್ನು ನೀಡಲಾಗುತ್ತಿದ್ದು, ಅರ್ಜಿದಾರ ಕಂಪನಿಯ ಈಕ್ವಿಟಿ ಪಾಲುದಾರರು, ಸುರಕ್ಷಿತ ಸಾಲಗಾರರು ಮತ್ತು ಅಸುರಕ್ಷಿತ ಸಾಲಗಾರರ ಸಭೆಯನ್ನು ಈ ಕೆಳಗಿನಂತೆ ಆಯೋಜಿಸಿದೆ.

| ಸಭೆ | ಈಕ್ವಿಟಿ ಪಾಲುದಾರರು | ಸುರಕ್ಷಿತ ಸಾಲಗಾರರು | ಸುರಕ್ಷಿತ ಸಾಲಗಾರರು |
|---|---|---|---|
| ದಿನ | ಮಂಗಳವಾರ | ಮಂಗಳವಾರ | ಮಂಗಳವಾರ |
| ದಿನಾಂಕ | 05/03/2019 | 05/03/2019 | 05/03/2019 |
| ಸಮಯ | ಬೆಳಿಗ್ಗೆ 10.30 | ಬೆಳಿಗ್ಗೆ 11.15 | ಮಧ್ಯಾಹ್ನ 12.00 |
| ಸಭೆಯ ಸ್ಥಳ | ನೊಂ. ಕಛೇರಿ: ನಂ.8, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಸೋಮನಹಳ್ಳಿ ಗ್ರಾಮ, ಮದ್ದೂರು ತಾಲೂಕು - 571 429 | | |

ಮೇಲೆ ತಿಳಿಸಿದ ಸ್ಥಳ ಮತ್ತು ಸಮಯದಲ್ಲಿ ಕ್ರಮವಾಗಿ ಸಂಬಂಧಿಸಿದ ಈಕ್ವಿಟಿ ಪಾಲುದಾರರು, ಸುರಕ್ಷಿತ ಸಾಲಗಾರರು ಮತ್ತು ಅಸುರಕ್ಷಿತ ಸಾಲಗಾರರು ಹಾಜರಿರಲು ಕೋರಲಾಗಿದೆ. ಸದರಿ ಕಂಪನಿಗಳ ಸಂಯೋಜನಾ ವ್ಯವಸ್ಥೆಯ ಸಂಬಂಧ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಪ್ರಕರಣ 230ರಲ್ಲಿ ಗಮನಿಸಿದಂತೆ ಯೋಜನೆಯ ಸೂಕ್ತ ವಿವರಣೆಯ ಪ್ರತಿಗಳನ್ನು ಮೇಲೆ ಹೆಸರಿಸಿದ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉಚಿತವಾಗಿ ಪಡೆಯಬಹುದು. ಸಭೆಗಳಲ್ಲಿ ಭಾಗವಹಿಸಿ ಮತ ಚಲಾಯಿಸಲು ಅರ್ಹತೆ ಇರುವ ಎಲ್ಲರು ಆಯಾ ಸಭೆಗಳಿಗೆ ವೈಯಕ್ತಿಕವಾಗಿ ಅಥವಾ ಪ್ರಾಕ್ಸಿ ಮೂಲಕ ಅಥವಾ ಅವರ ಅಧಿಕೃತ ಪ್ರತಿನಿಧಿ ಮತದಾನ ಮಾಡಬಯಸುವವರು ಅವಶ್ಯವಿರುವ ನಿರ್ದೇಶಿತ ಪ್ರಾಕ್ಸಿ ಅರ್ಜಿಯನ್ನು ಸಭೆಯ ಆರಂಭಕ್ಕಿಂತ 48 ಗಂಟೆಗಳ ಮೊದಲಾಗಿ ನೋಂದಾಯಿತ ಕಛೇರಿಯಲ್ಲಿ ದಾಖಲಿಸತಕ್ಕದ್ದು.

ನಿರ್ದೇಶಿತ ಪ್ರಾಕ್ಸಿ ಅರ್ಜಿಗಳನ್ನು ಕಂಪನಿಯ ನೋಂದಾಯಿತ ಕಛೇರಿಯಿಂದ ಪಡೆಯಬಹುದು. ಎನ್‌ಸಿಎಲ್‌ಟಿ ಶ್ರೀ ಗೋಪಾಲಕೃಷ್ಣ ಹೆಗಡೆ ಅವರನ್ನು ಎಲ್ಲಾ ಸಭೆಗಳ ಅಧ್ಯಕ್ಷರನ್ನಾಗಿ ನೇಮಿಸಿದೆ. ಸಭೆಯಲ್ಲಿ ಸದರಿ ಕಂಪನಿಗಳ ಸಂಯೋಜನಾ ಪ್ರಕ್ರಿಯೆಗೆ ಅನುಮೋದನೆ ದೊರೆತರೂ ಎನ್‌ಸಿಎಲ್‌ಟಿ ಯ ಸಮ್ಮತಿಗೆ ಒಳಪಟ್ಟಿರುತ್ತದೆ.

ಸಹಿ/-

ಸಿ ಎಸ್ ಗೋಪಾಲಕೃಷ್ಣ ಹೆಗಡೆ

ದಿನಾಂಕ: 01.02.2019

ಸಭೆಗಳಿಗೆ ನಿಯುಕ್ತಿಗೊಂಡ ಅಧ್ಯಕ್ಷರು